CLICK HERE TO DOWNLOAD ANNEXURE FOR THIS ANSWER

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 840 (887)

ಸದಸ್ಯರ ಹೆಸರು : ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 11.03.2026

ಉತ್ತರಿಸುವ ಸಚಿವರು : ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಎಷ್ಟು ವಕ್ಫ್ ಆಸ್ತಿಗಳು ಕಬಳಿಕೆಯಾಗಿವೆ ಮತ್ತು ವಕ್ಫ್‌ಗೆ ಸೇರಿದ ಆಸ್ತಿ ಕಬಳಿಕೆಯ ಆರೋಪಕ್ಕೆ ಗುರಿಯಾಗಿರುವವರ ಹೆಸರಿನ ಸಹಿತ ವಿವರ ನೀಡುವುದು ; | ರಾಜ್ಯದಲ್ಲಿ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ವಕ್ಫ್ ಆಸ್ತಿಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಪ್ರಕರಣಗಳನ್ವಯ ಒಟ್ಟು 2678 ಆಸ್ತಿಗಳು ಕಬಳಿಕೆ/ ಅಕ್ರಮ ಪರಭಾರೆ / ಒತ್ತುವರಿಯಾಗಿರುವುದು ಕಂಡು ಬಂದಿದೆ.<br><br>1. ಭೂ ಕಬಳಿಕೆ ನ್ಯಾಯಾಲಯದಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ: 25<br>2. ವಕ್ಫ್ ಕಾಯಿದೆ ಸೆಕ್ಷನ್ 52 ರಡಿ ದಾಖಲಾದ ಅಕ್ರಮ ಪರಭಾರೆಯಾದ ವಕ್ಫ್ ಆಸ್ತಿಗಳ ಸಂಖ್ಯೆ : 322<br>3. ವಕ್ಫ್ ಕಾಯಿದೆ ಸೆಕ್ಷನ್ 54 ರಡಿ ದಾಖಲಾದ ಒತ್ತುವರಿಯಾದ ವಕ್ಫ್ ಆಸ್ತಿಗಳ ಸಂಖ್ಯೆ : 2331<br><br>ಮುಂದುವರೆದು, ಕರ್ನಾಟಕ ರಾಜ್ಯ ವಕ್ಫ್ ಮಂಡಳಿಗೆ ಸೇರಿದ ಆಸ್ತಿ ಕಬಳಿಕೆ ಆರೋಪಕ್ಕೆ ಗುರಿಯಾಗಿರುವವರ ಹೆಸರಿನ ವಿವರ ಸಿ.ಡಿ.ಯಲ್ಲಿ ನೀಡಲಾಗಿದೆ. |
| ಆ) | ಈ ಆಸ್ತಿಯನ್ನು ಮರಳಿ ವಕ್ಫ್ ವಶಕ್ಕೆ ಪಡೆಯಲು ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ಒದಗಿಸುವುದು ಹಾಗೂ ಅನ್ವರ್ ಮಾಣಪ್ಪಾಡಿಯವರ ವರದಿಯ ಮೇಲೆ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ನೀಡುವುದು ; | ಕಬಳಿಕೆ/ಅಕ್ರಮ ಪರಭಾರೆ/ ಒತ್ತುವರಿಯಾದ ವಕ್ಫ್ ಆಸ್ತಿಯನ್ನು ಮರಳಿ ವಶಕ್ಕೆ ಪಡೆಯಲು ಈ ಕೆಳಕಂಡಂತೆ ವಿವಿಧ ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ. ಸದರಿ ಪ್ರಕರಣಗಳು ವಿಚಾರಣೆ ಹಂತದಲ್ಲಿರುತ್ತವೆ.<br><br>1. ಭೂಕಬಳಿಕೆ ನ್ಯಾಯಾಲಯ - 25<br>2. ವಕ್ಫ್ ಕಾಯಿದೆ ಸೆಕ್ಷನ್ 52 ರಡಿ -322<br>3. ವಕ್ಫ್ ಕಾಯಿದೆ ಸೆಕ್ಷನ್ 54 ರಡಿ -2331<br><br>ಮುಂದುವರೆದು, ಅನ್ವರ್ ಮಾಣಪ್ಪಾಡಿಯವರ ವರದಿಯನ್ನು 15ನೇ ವಿಧಾನ ಸಭೆಯ 7ನೇ ಅಧಿವೇಶನದಲ್ಲಿ ದಿನಾಂಕ:23.09.2020 ರಂದು ಹಾಗೂ ದಿನಾಂಕ:25.09.2020 ರಂದು ವಿಧಾನ ಪರಿಷತ್ತಿನ 141ನೇ ಅಧಿವೇಶನದಲ್ಲಿ ಮಂಡಿಸಲಾಗಿದ್ದು, ಸದರಿ ವರದಿಯ ಮೇಲೆ ಉಭಯ ಸದನಗಳಲ್ಲಿ ಯಾವುದೇ ಚರ್ಚೆ/ ನಿರ್ಣಯಗಳಾಗಿರುವುದಿಲ್ಲ.<br><br>ತದನಂತರ, ಸದರಿ ವರದಿಯನ್ನು ದಿನಾಂಕ:21.09.2022 ಮತ್ತು 23.09.2022 ರಂದು ನಡೆದ ವಿಧಾನ ಮಂಡಲದ ಅಧಿವೇಶನದಲ್ಲಿ ಉಭಯ ಸದನಗಳಲ್ಲಿ ಪುನಃ ಮಂಡಿಸಲಾಗಿದ್ದು, ಈ ಸಂಬಂಧ ಸದರಿ ವರದಿಯ ಮೇಲೆ ಯಾವುದೇ ನಿರ್ಣಯಗಳಾಗಿರುವುದಿಲ್ಲ. |